ಕರ್ನಾಟಕ ವಿಧಾನ ಸಭೆ

ಗುರುವಾರ 23ನೇ ಮಾರ್ಚ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 29 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು)

ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಹುತಾತ್ಮರ ಸ್ಮರಣೆ.

ವಿಷಯ: ಭಗತ್‌ಸಿಂಗ್ ರಾಜಗುರು ಸುಖದೇವ್ ಹುತಾತ್ಮರ ಬಗ್ಗೆ ಸ್ಮರಣೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಭಗತ್‌ಸಿಂಗ್ ರಾಜಗುರು ಸುಖದೇವ್‌ರವರನ್ನು ನೇಣುಗಂಬಕ್ಕೆ ಹಾಕಿದ ದಿವಸ. ಆದಕಾರಣ ಸದನದಲ್ಲಿ ಅವರಿಗೆ ಒಂದು ನಿಮಿಷ ಮೌನವನ್ನಾಚರಿಸಿ ಗೌರವ ಸಲ್ಲಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸುಖದೇವ್‌ರವರನ್ನು 1931ರ ಈ ದಿನ ಗಲ್ಲಿಗೇರಿಸಿದ್ದರು. ಅವರಿಗೆ ಈ ದಿನ ಗೌರವ ಸೂಚಿಸಿ ನೆನೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಆಗಿರುತ್ತದೆ. ಆದುದರಿಂದ ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಕಾಲ ಎದ್ದು ನಿಂತು ಗೌರವ ಸೂಚಿಸಬೇಕು.

(ಸದನದಲ್ಲಿ ಎಲ್ಲಾ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಕಾಲ ಗೌರವ ಸೂಚಿಸಿದರು)

2. ಪ್ರಶ್ನೋತ್ತರ :

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು)

ವಿಷಯ: ಗದಗ್‌ನ ಅನಾಥಾಲಯಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

31(208) ಶ್ರೀ ಪಾಟೀಲ್ ಡಿ.ಆರ್. (ಗದಗ) : ಮಾನ್ಯ ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗದುಗಿನಲ್ಲಿ ಒಂದು ಅತ್ಯುತ್ತಮ ಅನಾಥಾಲಯ ನಡೆಸುತ್ತಿರುವ ಬಾಸೆಲ್ ಮಿಶನ್ ಸಂಸ್ಥೆಗೆ ಕಳೆದ ಎರಡು ವರ್ಷಗಳಿಂದ ಅನುದಾನ ನಿಲ್ಲಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಬೇರ್ಪಡಿಸಿರುವುದರಿಂದ ಹಲವು ತೊಂದರೆಗೆ ಸಂಸ್ಥೆ ಒಳಗಾಗಿದ್ದು ಕೂಡಲೇ ಅವರಿಗೆ ಬರಬೇಕಾದ ಕಳೆದ ಎರಡು ವರ್ಷಗಳ ಅನುದಾನದೊಂದಿಗೆ ವರ್ಷದ ಅನುದಾನವನ್ನು ಕೂಡಲೇ ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಸರ್ಕಾರದ ಯೋಜನೆಗಳನ್ನು ಪ್ರಾಮಾಣಿಕವಾಗಿ ಪಾರದರ್ಶಕವಾಗಿ ಹಾಗೂ ಅನುಕರಣೀಯವಾಗಿ ಅನುಷ್ಠಾನಗೊಳಿಸುತ್ತಿರುವ ಇಂತಹ ಆದರ್ಶ ಸಂಸ್ಥೆಗಳಿಗೆ ಇನ್ನು ಮುಂದಾದರೂ ಅನುದಾನವನ್ನು ಪ್ರತಿ 3 ತಿಂಗಳಿಗೊಮ್ಮೆ ಸಿಗುವ ವ್ಯವಸ್ಥೆಯನ್ನು ಸರ್ಕಾರ ಮಾಡುವುದೇ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಸಚಿವರು)

ಅ) ಹೌದು.

ಆ) ಸರ್ಕಾರದ ಆದೇಶ ಸಂಖ್ಯೆ ಸಕಇ 219 ಬಿಎಂಎಸ್ 99, ದಿನಾಂಕ: 17–2–2000ರಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿದ್ದ ಅಲ್ಪಸಂಖ್ಯಾತರ ಯೋಜನೆಗಳನ್ನು ಅಲ್ಪಸಂಖ್ಯಾತರ ಇಲಾಖೆಗೆ ವರ್ಗಾಯಿಸಲಾಗಿದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ ಸಕಇ 219 ಬಿಎಂಎಸ್ 99, ದಿನಾಂಕ: 31–10–2000ರಲ್ಲಿ 39 ಅನಾಥಾಲಯಗಳನ್ನು ಅಲ್ಪಸಂಖ್ಯಾತರ ಇಲಾಖೆಗೆ ವರ್ಗಾಯಿಸಲಾಯಿತು. ಆದರೆ ಸದರಿ ಅನಾಥಾಲಯ ಪಟ್ಟಿಯಲ್ಲಿ **ಬಾಸೆಲ್ ಮಿಶನ್** ಅನಾಥಾಲಯ ಬೆಟಗೇರಿ, ಗದಗ್ ಸೇರಿರುವುದಿಲ್ಲ. ಈ ಸಂಸ್ಥೆಯು ಇನ್ನೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲೇ ಇದ್ದು ಅಲ್ಪಸಂಖ್ಯಾತರ ಇಲಾಖೆಗೆ ವರ್ಗಾಯಿಸುವವರೆಗೆ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಜಿಲ್ಲಾ ಪಂಚಾಯತ್ ಗದಗ್ ಇವರಿಂದ ಬಾಕಿ ಅನುದಾನ ಬಿಡುಗಡೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಸೂಕ್ತ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವರ್ಗ ಬೇರೆ ಬೇರೆಯಾಗಿಲ್ಲ. ಇದು ಜಿಲ್ಲಾ ಸೆಕ್ಟಾರ್‌ಗೆ ಟ್ರಾನ್ಸ್‌ಫರ್ ಆದ ಮೇಲೆ ಅನುದಾನ ಬಿಡುಗಡೆಯಾಗುವುದರಲ್ಲಿ ತಡವಾಗಬಾರದು. ಎರಡು ವರ್ಷಗಳಿಂದ ಅಂತಹ ಒಂದು ಸಂಸ್ಥೆಗೆ ಅನುದಾನ ಸಿಕ್ಕಿಲ್ಲವೆಂದರೆ ಪರಿಸ್ಥಿತಿಯನ್ನು ತಾವು ಊಹಿಸಿ. ಗದಗ್ ಜಿಲ್ಲಾ ಪಂಚಾಯತ್ ಚೀಫ್ ಸೆಕ್ರೆಟರಿಗೆ ತಾವು ಡೈರೆಕ್ಷನ್ ಕೊಟ್ಟು ಮಾರ್ಚ್ 31ರೊಳಗೆ ಪೂರ್ತಿ ಅನುದಾನ ಸಿಗುವಂತಹ ಭರವಸೆಯನ್ನು ತಾವು ಕೊಡಬೇಕು.

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಹಾಗೂ ಅಲ್ಪಸಂಖ್ಯಾತರ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿಂದೆ ಅನಾಥಾಲಯಗಳನ್ನು ಹಿಂದುಳಿದ ವರ್ಗಗಳ ಇಲಾಖೆಯ ಮತಿಯಿಂದ ನಡೆಸುತ್ತಿದ್ದು, ಈಗ ಅಲ್ಪಸಂಖ್ಯಾತರ ಇಲಾಖೆಗೆ ಸರ್ಕಾರದ ಆದೇಶ 2000ದ ಸಾಲಿನಲ್ಲಿ ಯೋಜನೆಗಳನ್ನು ವರ್ಗಾಯಿಸಲಾಯಿತು. ಆ ರೀತಿಯಾಗಿ 39 ಅನಾಥಾಲಯಗಳನ್ನು ಅಲ್ಪಸಂಖ್ಯಾತರ ಇಲಾಖೆಗೆ ವರ್ಗಾಯಿಸಲಾಗಿದೆ. ಆದರೆ ತಾವು ಕೇಳಿರುವ ಬಾಸೆಲ್ ಮಿಶನ್, ಬೆಟಗೇರಿ ಅನಾಥಾಲಯವನ್ನು ಅಲ್ಪಸಂಖ್ಯಾತರ ಇಲಾಖೆಗೆ ಸೇರಿಸಲಾಗಿಲ್ಲ. ಇಲ್ಲಿಯವರೆಗೆ ಜಿಲ್ಲಾ ಪಂಚಾಯತ್ ಮತಿಯಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಮಾನ್ಯ ಹಿರಿಯ ಶಾಸಕರಾದ ಪಾಟೀಲ್‌ರವರು ಹೇಳಿದ ಪ್ರಕಾರ ಅದರ ಬಗ್ಗೆ ತಕ್ಷಣ ಜಿಲ್ಲಾ ಪಂಚಾಯತ್‌ನವರಿಗೆ ಆದೇಶ ಕೊಟ್ಟು ಇಲ್ಲಿಯವರೆಗೆ ನಿಲ್ಲಿಸಿರುವ ಹಣವನ್ನು ಕೊಡುವುದಕ್ಕೆ ಆದೇಶಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅನುದಾನದ ಬಗ್ಗೆ ಹೇಳುವುದಾದರೆ ತಾವು ಹಾಗೂ ಮಾನ್ಯ ಸಮಾಜ ಕಲ್ಯಾಣ ಸಚಿವರು ಹೇಳಬೇಕು. ಸಂಸ್ಥೆಗಳು ಏನು ಅನುದಾನವನ್ನು ಸ್ವೀಕರಿಸುವುದು ಇರುತ್ತದೆ. ಅವುಗಳಿಗೆ ಆ ಅನುದಾನದ ಹಣ ಮೂರು ತಿಂಗಳಿಗೆ ಸರಿಯಾಗಿ ಬ್ಯಾಂಕ್ ಅಕೌಂಟ್‌ಗೆ ಜಮೆಯಾಗುವ ಹಾಗೆ ಆಗಬೇಕು. ಆ ರೀತಿಯಾಗಿ ಜಮೆಯಾಗುವ ಹಾಗೆ ಮಾಡಿದರೆ, ಬಹಳಷ್ಟು ದೂರು ಬರದಂತೆ ಆಗುತ್ತದೆ. ಅದರ ಬಗ್ಗೆ ತಾವು ಮತ್ತು ಮಾನ್ಯ ಬಾಲಚಂದ್ರ ಅವರು ಭರವಸೆ ಕೊಡಬೇಕು. ನಾವು ಕಾಲೇಜು ಕಲಿಯುವ ಸಂದರ್ಭದಲ್ಲಿ ಡಿವೈಡಿಂಗ್ ಸಿಸ್ಟಂ

ಎಂದು ಇತ್ತು. ಆಗ ನಾವೇ ಮೆನ್ಯು ಫಿಕ್ಸ್ ಮಾಡಿ ಅಡುಗೆಗೆ ಬೇಕಾದಂತಹ ಸಾಮಾನುಗಳನ್ನು ಖರೀದಿ ಮಾಡುತ್ತಿದ್ದೆವು. ಆ ರೀತಿಯಾಗಿ ಸಿಸ್ಟಂ ಇಂಟ್ರಡ್ಯೂಸ್ ಮಾಡುವುದಕ್ಕೆ ತೊಂದರೆ ಏನಿದೆ? ಈ ಸಿಸ್ಟಂ ಅನ್ನು ಮೊದಲು ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ ಇಂಟ್ರಡ್ಯೂಸ್ ಮಾಡಿ. ಈಗ ಹಾಸ್ಟೆಲ್‌ನಲ್ಲಿ ಏನು ಅವ್ಯವಹಾರ ಇದೆ. ಆ ಅವ್ಯವಹಾರ ಆಗದ ಹಾಗೆ ಆಗುತ್ತದೆ. ಆಗ ಹುಡುಗರೂ ಕೂಡ ಖುಷಿಯಿಂದ ಊಟವನ್ನು ಮಾಡುತ್ತಾರೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲ್‌ರವರು ಏನು ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಇದು ಬಹಳಷ್ಟು ಗಂಭೀರವಾಗಿರತಕ್ಕಂಥ ವಿಷಯ. ಅನುದಾನದ ಹಣವನ್ನು ಮೂರು ತಿಂಗಳಿಗೆ ಕೊಡುವಂತಹ ವ್ಯವಸ್ಥೆಯ ಬಗ್ಗೆ ಹೇಳಿದರು. ಆದರೆ ಕೆಲವು ಜಿಲ್ಲೆಗಳಲ್ಲಿ ಆರು ತಿಂಗಳವರೆಗೆ ಜಿಲ್ಲಾ ಪಂಚಾಯತ್ ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ತಮ್ಮ ಹತ್ತಿರ ಇಟ್ಟುಕೊಂಡಿದ್ದಾರೆ. ಬಿಲ್ ಸರಿಯಾಗಿ ಮಾಡಿಲ್ಲ ಎಂದು ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆ ಕೊಡುವುದಾಗಿದ್ದು, ಮಕ್ಕಳಿಗೆ ಕೊಡುವಂತಹ ಆಹಾರವನ್ನು ಯಾರು ಸಪ್ಲೈ ಮಾಡುತ್ತಾರೆ. ಅವರು ಸರಿಯಾಗಿ ಸಪ್ಲೈ ಮಾಡದೆ ಇದ್ದು, ಅವರನ್ನು ಕೇಳಿದರೆ ನಮಗೆ ದುಡ್ಡು ಬಂದಿಲ್ಲ. ಎಲ್ಲಿಂದ ನಾವು ಸಪ್ಲೈ ಮಾಡುವುದು ಎಂದು ಹೇಳುತ್ತಾರೆ. ನೌಕರರಿಗೆ ಯಾವ ರೀತಿಯಾಗಿ ಸಂಬಳಕ್ಕೆ 28ನೇ ತಾರೀಖಿನಂದು ಚೆಕ್ ಕೊಡುತ್ತಾರೆ. ಅದೇ ರೀತಿಯಾಗಿ ಈ ಅನುದಾನವೂ ಕೂಡ ಅವರಿಗೆ ಸರಿಯಾದ ಸಮಯಕ್ಕೆ ಮುಟ್ಟತಕ್ಕಂಥ ರೀತಿಯಲ್ಲಿ ಆಗಬೇಕು. ನಾನು ಶಾಸಕನಾಗಿ 12 ವರ್ಷಗಳಾದರೂ ಪ್ರತಿವರ್ಷ ಇದೇ ಗೋಳಾಗಿದೆ. ನೀವು ಅಧಿಕಾರಿಗಳನ್ನು ಕರೆದು ಕೇಳಿ. ಏಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಈ ವರ್ಷದ ದುಡ್ಡು ಕೊಡುತ್ತಾರೆ. ಈ ರೀತಿ ಆದರೆ ಹಾಸ್ಟೆಲ್‌ಗಳನ್ನು ಹೇಗೆ ನಡೆಸುವುದು, ಅದು ಸರಿಯಾಗುವುದಿಲ್ಲ. ಆದುದರಿಂದ ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ, 28ನೇ ತಾರೀಖಿನ ದಿವಸ ಬಿಲ್ ಆಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಪಾಟೀಲರು ಹಾಗೂ ಮಾನ್ಯ ಬಯ್ಯಾಪುರರವರು ಬಹಳ ಸೂಕ್ತವಾದಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ತಿಳಿಸಿದ ಪ್ರಕಾರ ಮೂರು ತಿಂಗಳಿಗೊಮ್ಮೆ ಹಣವನ್ನು ನೇರವಾಗಿ ಸಂಸ್ಥೆಗೆ ಮುಟ್ಟುವಂತೆ ಮಾಡಬೇಕು. ಅದನ್ನು ಗಮನದಲ್ಲಿಟ್ಟುಕೊಂಡು ಹಣಕಾಸು ಇಲಾಖೆಯಲ್ಲಿ ಹಣ ಏನು ಬಿಡುಗಡೆ ಮಾಡಬೇಕಾಗಿದೆ. ಯಾರು ಅಧಿಕಾರಿಗಳು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಎಸ್‌ಸಿ : ಎಸ್‌ಟಿ ಬ್ಯಾಕ್‌ವರ್ಡ್ ಹಾಸ್ಟೆಲ್‌ಗೆ ಸಂಬಂಧಪಟ್ಟ ಹಾಗೆ ಸಮಾಜ ಕಲ್ಯಾಣ ಸಚಿವರು .....

ಅಧ್ಯಕ್ಷರು : ಮಾನ್ಯ ಸದಸ್ಯರು ನೀವು ಏನು ಪ್ರಶ್ನೆ ಹಾಕಿದ್ದೀರಿ. ಅದರ ಬಗ್ಗೆ ಸಂಬಂಧಪಟ್ಟ ಸಚಿವರು ತಯಾರಾಗಿ ಬಂದಿದ್ದಾರೆ, ಉತ್ತರ ಹೇಳಿದ್ದಾರೆ. ಅವರು ಬೇರೆ ಇಲಾಖೆ ಮಂತ್ರಿಗಳು ಅದಕ್ಕೆ ನೀವು ಬೇರೆ ಪ್ರಶ್ನೆ ಹಾಕಿ ಅವರು ತಯಾರಾಗಿ ಬರಲಿ. ಅವರು ಆಯಿತು ಮಾಡುತ್ತೇವೆ ಎಂದರೆ, ನೀವು ಸಚಿವರು ಅಶ್ಯೂರೆನ್ಸ್ ಕೊಟ್ಟಿದ್ದಾರೆ ಎಂದು ಮತ್ತೆ ನಿಮ್ಮ ಅಶ್ಯೂರೆನ್ಸ್ ಕಮಿಟಿ ಮುಂದೆ ಬರುತ್ತದೆ.